# ಭಯಾನಕ ರಾಣಿ





ಬ್ರೆಜಿಲ್‌ನಲ್ಲಿ ಜನಿಸಿದ ಎಲೈನ್ ಡೇಡ್ಸನ್‌ಳಿಗೆ ಮೈ ಮುಖದ ಮೇಲೆಲ್ಲಾ ಲೋಹದಿಂದ ಚುಚ್ಚಿಸಿಕೊಂಡು, ಆ ರಂಧ್ರಗಳಲ್ಲಿ ಆಭರಣಗಳನ್ನು ಸಿಕ್ಕಿಸಿಕೊಳ್ಳುವ ವಿಚಿತ್ರ ಖಯಾಲಿ! 2000ನೇ ಇಸವಿಯಲ್ಲಿ 465 ರಂಧ್ರಗಳನ್ನು (ಅದರಲ್ಲೂ ಮುಖವೊಂದರಲ್ಲೇ 194 ರಂಧ್ರಗಳ ಸಹಿತ) ಚುಚ್ಚಿಸಿಕೊಂಡು ವಿಶ್ವದಾಖಲೆ ಮಾಡಿದ್ದಳೀಕೆ. ಕಳೆದ ವರ್ಷ ಬರೊಬ್ಬರಿ 6000ಕ್ಕೂ ಮಿಕ್ಕಿ ದೇಹದ ಮೇಲೆ ಚುಚ್ಚಿಸಿಕೊಂಡು, ಗಿನ್ನಿಸ್ ರೆಕಾರ್ಡ್‌ನಲ್ಲಿ ತನ್ನದೇ ಹಳೆ ದಾಖಲೆಯನ್ನು ಮುರಿದಿದ್ದಾಳೆ.

ನಿತ್ಯ ಸುಮಾರು ಮೂರು ಕೆ.ಜಿ.ಯಷ್ಟು ಒಡವೆಗಳನ್ನು ಧರಿಸಿಯೇ ಮಲಗುತ್ತಿದ್ದರೂ ಈಕೆಗೆ ಚೆನ್ನಾಗಿ ನಿದ್ರೆ ಬರುತ್ತದೆಯಂತೆ. ಸಿಗರೇಟ್, ಮದ್ಯ ಸೇವನೆ ಮುಂತಾದ ದುರಭ್ಯಾಸಗಳೊಂದೂ ಇರದ ಈಕೆಗೆ ಕೋಕಾಕೋಲಾ ಮಾತ್ರ ಇಷ್ಟವಂತೆ.

■ ವಿದ್ಯಾ ಹಾಲಭಾವಿ

